## ದೀರ್ಘಾಯುಷ್ಯದ ರಹಸ್ಯ

ಟೀವಿ ಪತ್ರಕರ್ತನೊಬ್ಬ 50ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ಗುಂಡ ಮತ್ತು ಗುಂಡಿಯ ದೀರ್ಘಾಯುಷ್ಯದ ಗುಟ್ಟು ಕೇಳಿದ. ಗುಂಡ, 'ಏನಿಲ್ಲ, ಎಲ್ಲಾ ಗಂಡ ಹೆಂಡಿರಂತೆ ನಮ್ಮ ನಡುವೆಯೂ ವಾದ ವಿವಾದ ನಡೆಯುತ್ತವೆ. ಆದರೆ ಸೋತವರು ಮೂರು ಕಿಲೋಮೀಟರ್ ನಡೆಯಬೇಕು ಎನ್ನುವ ಒಪ್ಪಂದ ಮಾಡಿಕೊಂಡಿದ್ದೇವೆ. ಪ್ರತಿ ಸಲ ನಾನೇ ಸೋಲುವುದರಿಂದ ನಾನೇ ಮೂರು ಕಿ.ಮೀ ನಡೆಯಬೇಕು. ಅದೇ ನನ್ನ ಆರೋಗ್ಯದ ಗುಟ್ಟು' ಎಂದು ವಿವರಿಸಿದ. 'ಆದರೆ ನಿಮ್ಮ ಹೆಂಡತಿಯೂ ಅಷ್ಟೇ ಆರೋಗ್ಯವಾಗಿದ್ದಾರಲ್ಲ? ಅದರ ರಹಸ್ಯ ಏನು?' ಎಂದ ಪತ್ರಕರ್ತ. 'ಅವಳಿಗೆ ನನ್ನ ಮೇಲೆ ಸಂಶಯ, ಅದಕ್ಕೆ ನಾನು ಮೂರು ಕಿ.ಮೀ ನಡೆಯುತ್ತೇನೊ ಇಲ್ಲವೊ ಎನ್ನುವುದನ್ನು ಪರೀಕ್ಷಿಸಲು ಅವಳೂ ನನ್ನನ್ನು ಹಿಂಬಾಲಿಸಿ ಬರುತ್ತಾಳೆ' ಎಂದ ಗುಂಡ!

**ಎಂ.ಕೆ. ಮಂಜುನಾಥ್**



ಚಿತ್ರಗಳು: ಗಣೇಶ ಆಚಾರ್ಯ



## ಮಗನ ಸಹಾಯ

ತಿಪ್ಪೇಶಿ ಪತ್ನಿಯನ್ನು ಕೇಳಿದ, 'ಏನೇ, ಪಕ್ಕದ ಮನೆಗೆ ಹೊಸದಾಗಿ ಬಾಡಿಗೆ ಬಂದಿದ್ದಾರಲ್ಲ, ಅವರ ಮನೆಯಲ್ಲಿ ಕಾಲೇಜಿಗೆ ಹೋಗೊ ಹುಡುಗಿ ಇದ್ದಾಳಾ?'

ಹೆಂಡತಿ ಹೇಳಿದಳು, 'ಗೊತ್ತಿಲ್ಲವಲ್ಲ, ಯಾಕ್ರಿ?'

'ಏನಿಲ್ಲ, ನಿನ್ನೆ ಲಾರಿಯಿಂದ ಅವರು ಸಾಮಾನು ಇಳಿಸುವಾಗ ನಿನ್ನ ಮುದ್ದು ಮಗ ಸಹಾಯಕ್ಕೆ ಹೋಗಿದ್ದನಲ್ಲ, ಅದಕ್ಕೆ ಕೇಳಿದೆ' ಅಂದ ತಿಪ್ಪೇಶಿ.

**ಶೋಭಾ ಪ್ರಮೋದ್**